ಇಂದು ದಿಃ 04.11.2025 ರಂದು ಸಾಕ್ಷಿಯನ್ನು ಕರೆಯಿಸಲಾಯಿತು. ಪ್ರಮಾಣ ವಚನ ಬೋದಿಸಲಾಯಿತು.

ಮುಂದುವರೆದ ಪಾಟೀ ಸವಾಲುಃ ಪ್ರತಿವಾದಿ ಪರ ವಕೀಲರಿಂದಃ

ಸಿದ್ದರಾಮನಾಯಕರ 4 ಜನ ಗಂಡು ಮಕ್ಕಳು ಯಾವಾಗ ವಿಭಾಗ ಮಾಡಿಕೊಂಡರು ಎಂದು ನನಗೆ ಗೊತ್ತಿಲ್ಲ. ಸಿದ್ದರಾಮನಾಯಕರ ಎಲ್ಲಾ ಮಕ್ಕಳು ಒಟ್ಟಿಗೆ ಸ್ವಾಧೀನದಲ್ಲಿ ಇದ್ದ ಬಗ್ಗೆ ನನಗೆ ಗೊತ್ತಿಲ್ಲ. ಸಿದ್ದರಾಮನಾಯಕರು ಯಾವಾಗ ಮೃತಪಟ್ಟರು ಎಂದು ಸಹ ನನಗೆ ಗೊತ್ತಿಲ್ಲ. ಸಿದ್ದರಾಮನಾಯಕರ ಮಕ್ಕಳು ಯಾವಾಗ ಮೃತಪಟ್ಟರು ಎಂದು ಸಹ ನನಗೆ ಗೊತ್ತಿಲ್ಲ. ಸಿದ್ದರಾಮನಾಯಕರ ಹೆಂಡತಿ ಮತ್ತು ಮಕ್ಕಳು ಅಂದರೆ ವಾರಸುದಾರರು ಇದ್ದರು. ಸಿದ್ದರಾಮನಾಯಕರ ಅಜ್ಜಿ ಇರುತ್ತಾರೆ ಅವರ ಹೆಸರು ನನಗೆ ಗೊತ್ತಿಲ್ಲ. ಆ ಮಕ್ಕಳನ್ನು ಈ ದಾವೆಯಲ್ಲಿ ಪಕ್ಷಗಾರರನ್ನಾಗಿ ಮಾಡಿರುವುದಿಲ್ಲ. ಅವರೆಲ್ಲರೂ ಎಷ್ಟೆಷ್ಟು ಸ್ವಾಧೀನದಲ್ಲಿ ಯಾರ್ಯಾರು ಇದ್ದರು ಎಂದು ಗೊತ್ತಿಲ್ಲ. ನನ್ನ ಅಜ್ಜಿ ದೊಡ್ಡಮ್ಮ ಯಾವಾಗ ಮೃತಪಟ್ಟರು ಎಂದು ನನಗೆ ಗೊತ್ತಿಲ್ಲ. ಅವರನ್ನು ಸಿದ್ದನಾಯಕ ಯಾನೆ ಇಂತನಾಯಕ ಯಾವಾಗ ಮದುವೆಯಾದರು ಎಂದು ಗೊತ್ತಿಲ್ಲ. ನನ್ನ ಅಜ್ಜಿಯನ್ನು ಯಾವಾಗ ಮದುವೆಯಾದರು ಎಂದು ನನಗೆ ಗೊತ್ತಿಲ್ಲ. ಇಂತನಾಯಕನಿಗೆ 4 ಜನ ಮಕ್ಕಳು ಹುಟ್ಟಿರುತ್ತಾರೆ. ಆ ಪೈಕಿ ಪುಟ್ಟ ನಾಗಮ್ಮ ಮೃತರಾಗಿರುತ್ತಾರೆ, ಅವರ ಮಕ್ಕಳು ಇರುತ್ತಾರೆ. ಅವರನ್ನು ಈ ದಾವೆಯಲ್ಲಿ ಪಕ್ಷಗಾರರನ್ನಾಗಿ ಮಾಡಿರುವುದಿಲ್ಲ.

ದಾವಾ ಆಸ್ತಿಯನ್ನು ನಾನು ಮತ್ತು ನನ್ನ ತಾಯಿ ನೋಡಿದ್ದೇವೆ. ದಾವಾ ಆಸ್ತಿಗಳು ನನ್ನ ತಾತನಿಗೆ ಹೇಗೆ ಬಂತು ಎಂದು ನನಗೆ ಗೊತ್ತಿಲ್ಲ. ದಾವಾ ಆಸ್ತಿಯ ಚೆಕ್ಕುಬಂಧಿ ಸಹ ನನಗೆ ಗೊತ್ತಿಲ್ಲ. ದಾವಾ ಆಸ್ತಿಯ ಚೆಕ್ಕುಬಂಧಿಯನ್ನು ನಾನು ಕೊಟ್ಟಿಲ್ಲ, ಕೊಟ್ಟಿದ್ದರೂ ಸಹ ಅದು ತಪ್ಪಿದೆ ಎಂದರೆ ಸರಿಯಲ್ಲ. ದಾವಾ ಆಸ್ತಿಗಳು ನನ್ನ ತಾತನಿಗಾಗಲೀ, 1ನೇ ಪ್ರತಿವಾದಿಗಾಗಲೀ ಹೇಗೆ ಬಂತು ಎಂದು ಕೂಲಕುಂಶವಾಗಿ ಪರಿಶೀಲನೆ ಮಾಡಲಾಗಿ ಅದು ಹೇಗೆ ಬಂದು ಎಂದು ತಿಳಿದಿರುವುದಿಲ್ಲ. ನನ್ನ ತಾತ ಇರುವಾಗಲೇ ನನ್ನ ಅಜ್ಜಿ ಅಥವಾ ತಾಯಿ ವಿಭಾಗ ಕೇಳಿದ್ದು ನನ್ನ ತಾತ ವಿಭಾಗ ಕೊಡುತ್ತೇನೆ ಎಂದು ಹೇಳಿದ್ದರು. ಆ ರೀತಿ ವಿಭಾಗ ಕೊಡುತ್ತೇನೆ ಎಂದು ಹೇಳಿದ ಬಗ್ಗೆ ನನ್ನ ಬಳಿ ದಾಖಲೆ ಇಲ್ಲ. ಆಸ್ತಿಯಲ್ಲಿ ವಿಭಾಗ ಕೇಳಿದ ವ್ಯಕ್ತಿಗಳು ಈಗಲೂ ಸಹ ಬದುಕಿದ್ದಾರೆ. ಮೊದಲ ಬಾರಿಗೆ 2019ರಲ್ಲಿ ವಿಭಾಗ ಕೇಳಿದ್ದೆವು. ಆಗ ನನ್ನ ತಾಯಿ ಮತ್ತು ನನ್ನ ಮಾವನಾದ ಮಾದನಾಯಕನ ಮಗ ಸಿದ್ದರಾಮನಾಯಕ ಇದ್ದರು. ಅವರು ಈಗಲೂ ಸಹ ಇದ್ದಾರೆ. ಅವರು ನ್ಯಾಯಾಲಯಕ್ಕೆ ಬಂದು ಸಾಕ್ಷ್ಯ ನುಡಿಯಬಹುದು. ದಾವಾ ಆಸ್ತಿಯಲ್ಲಿ ನಾವು ಯಾವತ್ತೂ ವಿಭಾಗ ಕೇಳಿಲ್ಲ ಹಾಗೂ ಆ ಬಗ್ಗೆ ದಾಖಲೆ ಇಲ್ಲ ಎಂದರೆ ಸರಿಯಲ್ಲ. ದಾವಾ ಆಸ್ತಿಯಲ್ಲಿ ನಮಗೆ ಹಕ್ಕು ಇಲ್ಲದ ಕಾರಣ ನನ್ನ ಅಜ್ಜಿ ಮತ್ತು ತಾತ ಇದ್ದಾಗ ವಿಭಾಗ ಕೇಳಿಲ್ಲ ಎಂದರೆ ಸರಿಯಲ್ಲ. ನನ್ನ ಅಜ್ಜಿ ವಿಭಾಗ ಕೊಡಿ ಎಂದು

ಕೇಳಿದ್ದರು. ದಾವಾ ಆಸ್ತಿಯಲ್ಲಿ ಭೂ ನ್ಯಾಯಾಮಂಡಳಿಯಿಂದ ಮಂಜೂರಾದ ಯಾವುದಾದರೂ ಆಸ್ತಿ ಇದೆಯೇ ಎಂದು ನನಗೆ ಗೊತ್ತಿಲ್ಲ.

ಮರುವಿಚಾರಣೆಃ ಇಲ್ಲ.

ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಓ.ಹೇ.ಕೇ.ಸ.ಇದೆ.
ಸಹಿ/-
ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ ಎಂ ಎಫ್ ಸಿ, ನಂಜನಗೂಡು.